**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವನಹಳ್ಳಿ**

**ಉಪಸ್ಥಿತರು:** ಶ್ರೀ ಸಂದೇಶ.ಕೆ., ಎಂ.ಎ.,ಎಲ್‌ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು,
ದೇವನಹಳ್ಳಿ.

**2021 ನೇ ಇಸವಿ, ನವೆಂಬರ್ 24 ನೇ ತಾರೀಖು**

**<u>ಜಾರಿ ಅರ್ಜಿ ಸಂಖ್ಯೆ:1/2012</u>**

**ಡಿಕ್ರೀದಾರರು:** ಶ್ರೀ.ಮುನಿಯಪ್ಪ

**-ವಿರುದ್ಧ-**

**ತೀರ್ಪುಋಣಿ ದಾರರು:** ಶ್ರಿ. ಕೃಷ್ಣಪ್ಪ ಮತ್ತು ಇತರರು

**<u>ಮಧ್ಯಂತರ ಅರ್ಜಿ-1 ರ ಪಕ್ಷಕಾರರು</u>**

**ಅರ್ಜಿದಾರ/**ಡಿಕ್ರೀದಾರರು: ಶ್ರೀ.ಮುನಿಯಪ್ಪ

**-ವಿರುದ್ದ**

**ಎದುರುದಾರರು/**
**ತೀರ್ಪುಋಣಿ ದಾರರು:** ಶ್ರಿ. ಕೃಷ್ಣಪ್ಪ ಮತ್ತು ಇತರರು

*******

**<u>ಡಿಕ್ರಿದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-1 ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹಕಲಂ 151 ರ ಮೇಲೆ ಆದೇಶ</u>**

ಡಿಕ್ರಿದಾರರು ಪ್ರಸ್ತುತ ಮಧ್ಯಂತರ ಅರ್ಜಿ-1 ನ್ನು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹಕಲಂ 151 ರ ರಡಿಯಲ್ಲಿ ಸಲ್ಲಿಸಿ,

ಎದುರುದಾರರು ದಾವಾ ಸ್ವತ್ತಿನಲ್ಲಿ ಯಾವುದೇ ಕಟ್ಟಡ ಕಾಮಗಾರಿಯನ್ನು ಮಾಡಿದಂತೆ ಅರ್ಜಿ ತೀರ್ಮಾನ ಆಗುವವರೆಗೂ ತಾತ್ಕಾಲಿಕ ತಡೆಯಾಜ್ಞೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

<u>**ಅರ್ಜಿಯ ಸಂಕ್ಷಿಪ್ತ ಸಾರಾಂಶವು ಈ ಕೆಳಗಿನಂತಿದೆಃ**</u>

2.ಅರ್ಜಿದಾರ /ಡಿಕ್ರಿದಾರರು ತಮ್ಮ ಪ್ರಮಾಣ ಪತ್ರದಲ್ಲಿ ಪ್ರಮಾಣೀಕರಿಸಿರುವಂತೆ, ಪ್ರಸ್ತುತ ಜಾರಿ ಅರ್ಜಿಯನ್ನು ತೀರ್ಪು ಋಣಿಯ ವಿರುದ್ದ ದಾವಾ ಸ್ವತ್ತಿನ ಸ್ವಾಧೀನತೆಯನ್ನು ಬಿಟ್ಟು ಕೊಟ್ಟು, ಅಸಲು ದಾವಾ ಸಂಖ್ಯೆ 196/2000 ರಲ್ಲಿ ರಾಜಿ ಅರ್ಜಿ ಸಲ್ಲಿಸಿರುತ್ತಾರೆ. ತದನಂತರದಲ್ಲಿ ಡಿಕ್ರಿಯಾಗಿ ತೀರ್ಪು ಋಣಿ ದಾವಾ ಸ್ವತ್ತಿನ ಸ್ವಾಧೀನತೆಯನ್ನು ನ್ಯಾಯಾಲಯದ ಆದೇಶದಂತೆ ಬಿಟ್ಟು ಕೊಟ್ಟಿರುವುದಿಲ್ಲ. ತೀರ್ಪು ಋಣಿಯು ದಾವಾ ಸ್ವತ್ತಿನಲ್ಲಿ ಕಟ್ಟಡ ಕಾಮಗಾರಿ ಮಾಡಲು ಪ್ರಯತ್ನಿಸಿರುತ್ತಾರೆ. ಅನ್ಯ ಮಾರ್ಗ ಇಲ್ಲದೇ ಡಿಕ್ರಿದಾರರು ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಒಂದು ವೇಳೆ ಅರ್ಜಿಯನ್ನು ಪುರಸ್ಕರಿಸದೇ ಹೋದರೆ ಡಿಕ್ರಿದಾರರರಿಗೆ ತುಂಬಲಾದರ ನಷ್ಟ ಉಂಟಾಗುತ್ತದೆ. ಆದ್ದರಿಂದ ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೋರಿಕೊಂಡಿರುತ್ತಾರೆ.

3.ಡಿಕ್ರಿದಾರರು ***ಸಲ್ಲಿಸಿರುವ ಮಧ್ಯಂತರ ಅರ್ಜಿ-1*** ***ನ್ನು ವಿರೋಧಿಸಿ ತೀರ್ಪು ಋಣಿಯು ತಕರಾರನ್ನು ಸಲ್ಲಿಸಿದ್ದು, ತಮ್ಮ ತಕರಾರಿನಲ್ಲಿ,*** ಜಾರಿ ಅರ್ಜಿಯಲ್ಲಿ ತಿಳಿಸಿರುವ ಅಂಶಗಳು ಕಾನೂನು ಹಾಗೂ ಸಂಗತಿ ದೃಷ್ಟಿಯಿಂದ ಊರ್ಜಿತವಾಗಿರುವುದಿಲ್ಲ. ಪ್ರಸ್ತುತ ಅರ್ಜಿಯನ್ನು ಸತ್ಯಾಂಶಗಳನ್ನು ಮರೆ ಮಾಚಿ ಡಿಕ್ರಿದಾರರು ಸಲ್ಲಿಸಿರುತ್ತಾರೆ. ಹಾಗೂ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಅಸಲು ದಾವಾ ಸಂಖ್ಯೆ196/2006 ರಲ್ಲಿ ನ್ಯಾಯಾಲಯವು ಡಿಕ್ರಿ ಮಾಡದ ನಂತರ ತೀರ್ಪು ಋಣಿಯು ದಾವಾ ಸ್ವತ್ತನ್ನು ಡಿಕ್ರಿದಾರರರಿಗೆ ನೀಡಿರುತ್ತಾರೆ. ಆದರೆ ಜಾರಿ ಅರ್ಜಿಯಲ್ಲಿ ತಿಳಿಸಿರುವ ಚೆಕ್ಕು ಬಂದಿ ಬದಲಾವಣೆಯಾಗಿರುತ್ತದೆ. ಅಲ್ಲದೇ ಪಂಚಾಯ್ತಿ ದಾಖಲೆಗಳು ಈಗಾಗಲೇ ಡಿಕ್ರಿದಾರರ ಹೆಸರಿಗೆ ಬದಲಾವಣೆಯಾಗಿರುತ್ತದೆ. ಡಿಕ್ರಿದಾರರು ಪೋಲೀಸರ ಸಹಾಯವನ್ನು ಕೋರಿ

ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯು ತಿರಸ್ಕೃತಗೊಂಡಿರುತ್ತದೆ. ತೀರ್ಪುಖುಣೆಯ ವಿರುದ್ದ ಒಂದಲ್ಲ ಒಂದು ಅರ್ಜಿಯನ್ನು ಡಿಕ್ರಿದಾರರು ತೊಂದರೆ ಕೊಡುವ ಉದ್ದೇಶದಿಂದ ಸಲ್ಲಿಸಿರುತ್ತಾರೆ. ಆದ್ದರಿಂದ ಡಿಕ್ರಿದಾರರು ಸಲ್ಲಿಸಿರುವ ಅರ್ಜಿ ಕಾನೂನು ಹಾಗೂ ಸಂಗತಿ ದೃಷ್ಟಿಯಿಂದ ಊರ್ಜಿತವಾಗಿರುವುದಿಲ್ಲ. ಆದ್ದರಿಂದ ಅರ್ಜಿಯನ್ನು ವಜಾಗೋಳಿಸುವಂತೆ ಕೋರಿಕೊಂಡಿರುತ್ತಾರೆ.

4. ಎರಡುಪಕ್ಷಕಾರರ ಪರ ವಕೀಲರ ವಾದಮಂಡನೆಯನ್ನು ಆಲಿಸಲಾಯಿತು ಹಾಗೂ ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು.

5. ಈ ಕೆಳಗಿನ ಅಂಶಗಳು ನ್ಯಾಯಾಲಯದ ಪರ್ಯಾಲೋಚನೆಗೆ ಉದ್ಭವಿಸುತ್ತವೆ:

**1. ಡಿಕ್ರಿದಾರರು/ಅರ್ಜಿದಾರ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡುವಂತಹ ಮೇಲ್ನೋಟದ ಪ್ರಕರಣವಿರುವುದನ್ನು ರುಜುವಾತು ಪಡಿಸಿದ್ದಾರೆಯೇ?**

**2. ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಿದ್ದಲ್ಲಿ/ನೀಡದೇ ಇದ್ದಲ್ಲಿ ಡಿಕ್ರಿದಾರರಿಗೆ ಅತೀ ಹೆಚ್ಚಿನ ತೊಂದರೆ ಉಂಟಾಗುತ್ತದೆಯೇ?**

**3. ಅನುಕೂಲತೆಯ ತಕ್ಕಡಿ ಯಾರ ಪರವಾಗಿರುತ್ತದೆ?**

**4. ಏನು ಆದೇಶ?**

**6.** ಈ ಮೇಲಿನ ಅಂಶಗಳಿಗೆ ಈ ಕೆಳಗೆ ವಿವರಿಸಿರುವ ಕಾರಣಗಳಿಗಾಗಿ ನನ್ನ ಉತ್ತರಗಳು ಈ ಕೆಳಗಿನಂತಿವೆ:

**ಅಂಶ 1 : ನಕಾರಾತ್ಮಕ**

**ಅಂಶ 2 : ನಕಾರಾತ್ಮಕ**

**ಅಂಶ 3 : ನಕಾರಾತ್ಮಕ**

**ಅಂಶ 4 : ಅಂತಿಮ ಆದೇಶದಂತೆ:**

## ಕಾರಣಗಳು

**07.ಅಂಶ-1 ರಿಂದ 3 :**.ಈ ಮೂರು ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಪುನರಾವರ್ತನೆಯನ್ನು ತಪ್ಪಿಸುವ ಉದ್ದೇಶದಿಂದ ಒಟ್ಟಿಗೆ ಚರ್ಚೆಗೆ ತಗೆದುಕೊಳ್ಳಲಾಗಿದೆ

08. ಪ್ರಸ್ತುತ ಜಾರಿ ಅರ್ಜಿಯನ್ನು ಡಿಕ್ರಿದಾರರು ತೀರ್ಪು ಋಣಿಯ ವಿರುದ್ದ ಅಲಸು ದಾವಾ ಸಂಖ್ಯೆ196/2000 ರಲ್ಲಿ ಆಗಿರುವ ತೀರ್ಪಗೆ ಸಂಬಂದಪಟ್ಟಂತೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ದಾವಾ ಸ್ವತ್ತು ಡಿಕ್ರಿದಾರರಿಗೆ ಕೋಡಿಸುವಂತೆ ಕೋರಿ ಸಲ್ಲಿಸಿರುತ್ತಾರೆ. ಡಿಕ್ರಿದಾರರ ತನ್ನ ವಾದ ಮಂಡನೆಯಲ್ಲಿ ಅಸಲು ದಾವಾ ಸಂಖ್ಯೆ196/2000 ದಾವೆಯಲ್ಲಿ ವಾದಿ ಮತ್ತು ಪ್ರತಿವಾದಿಯರ ನಡುವೆ ರಾಜಿ ಆಗಿದ್ದು, ನಂತರ ತೀರ್ಪು ಋಣಿಯು ದಾವಾ ಸ್ವತ್ತನ್ನು ಡಿಕ್ರಿದಾರರಿಗೆ ಬಿಟ್ಟು ಕೊಟ್ಟಿರುವುದಿಲ್ಲ. ತದನಂತರದಲ್ಲಿ ಡಿಕ್ರಿದಾರರು ಜಾರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆ ಸಂದರ್ಬದಲ್ಲಿ ತೀರ್ಪುಋಣಿಯು ದಾವಾ ಸ್ವತ್ತಿನಲ್ಲಿ ಕಟ್ಟಡ ಕಾಮಗಾರಿಯನ್ನು ಮಾಡಲು ಪ್ರಯತ್ನಿಸಿರುತ್ತಾರೆ. ಒಂದು ವೇಳೆ ಕಟ್ಟಡ ಕಾಮಗಾರಿ ಮಾಡದರೆ ಡಿಕ್ರಿದಾರರಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ. ಅದ್ದರಿಂದ ಪುರಸ್ಕರಿಸಬೇಕೆಂದು ವಾದ ಮಂಡಿಸಿರುತ್ತಾರೆ.

08. ಅಲ್ಲದೇ ಡಿಕ್ರಿದಾರರ ತಮ್ಮ ಮುಂದುವರೆದ ವಾದ ಮಂಡನೆಯಲ್ಲಿ, ತೀರ್ಪು ಋಣಿಯು ಉದ್ದೇಶಪೂರ್ವಕವಾಗಿ ದಾವಾ ಸ್ವತ್ತನ್ನು ಬಿಟ್ಟು ಕೊಟ್ಟಿರುತ್ತಾರೆ ಎಂದು ತಿಳಿಸಿದ್ದು, ಆದರೆ ಯಾವುದೇ ಡಿಕ್ರಿದಾರರರಿಗೆ ತೀರ್ಪು ಋಣಿಯು ಬಿಟ್ಟುಕೊಟ್ಟಿರುವುದಿಲ್ಲ. ಒಂದು ವೇಳೆ ಡಿಕ್ರಿದಾರರಿಗೆ ಸೇರಿದ ಸ್ವತ್ತಿನಲ್ಲಿ ಕಟ್ಟಡ ಕಾಮಗಾರಿ ಮಾಡಿದರೆ ಡಿಕ್ರಿದಾರರಿಗೆ ನಷ್ಟ ಉಂಟಾಗುತ್ತದೆ. ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಬೇಕೆಂದು ವಾದ ಮಂಡಿಸಿರುತ್ತಾರೆ.

09. ತೀರ್ಪುದಾರ ಋಣಿಯು ತನ್ನ ವಾದ ಮಂಡನೆಯಲ್ಲಿ ಈಗಾಗಲೇ ಅಸಲು ದಾವಾ ಸಂಖ್ಯೆ: 196/2000 ರಲ್ಲಿ ದಾವೆ ರಾಜಿ ಆಗಿದ್ದು, ದಾವಾ ಸ್ವತ್ತನ್ನು ರಾಜಿ ಅರ್ಜಿಯಿಂದ ಡಿಕ್ರಿದಾರರಿಗೆ ಬಿಟ್ಟುಕೊಡಲಾಗಿರುತ್ತದೆ. ಅದಕ್ಕೆ ಸಂಬಂಧಿಸಿದಂತೆ ಡಿಕ್ರಿದಾರರ ಹೆಸರಿಗೆ ಖಾತೆಯು ಸಹ ಬದಲಾವಣೆಯಾಗಿರುತ್ತದೆ. ತದನಂತರದಲ್ಲಿ ಡಿಕ್ರಿದಾರರು ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುವುದು ಊರ್ಜಿತವಾಗಿರುವುದಿಲ್ಲ. ಉದ್ದೇಶಪೂರ್ವಕವಾಗಿ ತೀರ್ಪುದಾರ ಋಣಿಯ ವಿರುದ್ದ ಪ್ರಸ್ತುತ ಅರ್ಜಿಯನ್ನು ಡಿಕ್ರಿದಾರರು ಸಲ್ಲಿಸಿರುತ್ತಾರೆ. ಆದರೆ ಸತ್ಯಾಂಶಗಳನ್ನು ಮರೆಮಾಚಿ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ತೀರ್ಪುದಾರ ಋಣಿಯ ವಿರುದ್ದ ಅರ್ಜಿ ಸಲ್ಲಿಸಿರುತ್ತಾರೆ. ಈಗಾಗಲೇ ತಿಳಿಸಿರುವಂತೆ ಜಾರಿ ಅರ್ಜಿಯಲ್ಲಿ ತಿಳಿಸಿರುವ ಸ್ವತ್ತಿನ ಸ್ವಾಧೀನತೆಯನ್ನು ಡಿಕ್ರಿದಾರರಿಗೆ ಬಿಟ್ಟುಕೊಟ್ಟಿದ್ದು, ಅದಕ್ಕೆ ಪೂರಕವಾಗಿ ಗ್ರಾಮಪಂಚಾಯ್ತಿಯಲ್ಲಿ ದಾಖಲೆಗಳು ಆಗಿರುತ್ತದೆ. ಆದ್ದರಿಂದ ಅರ್ಜಿಯನ್ನು ವಜಾಗೋಳಿಸಬೇಕೆಂದು ವಾದ ಮಂಡಿಸಿರುತ್ತಾರೆ.

10. ತೀರ್ಪುದಾರ ಋಣಿಯು ಅಸಲು ದಾವಾ ಸಂಖ್ಯೆ:196/2000 ಕ್ಕೆ ಸಂಬಂಧಿಸಿದಂತೆ ಡಿಕ್ರಿಯನ್ನು ಹಾಜರುಪಸಿಡಿದ್ದು, ಪ್ರಸ್ತುತ ಅಸಲು ದಾವಾ ಸಂಖ್ಯೆ:196/2000 ನ್ನು ದಾವಾ ಸ್ವತ್ತಿಗೆ ಸಂಬಂದಪಟ್ಟಂತೆ ಪ್ರತಿವಾದಿಯರ ವಿರುದ್ದ ವಿಭಾಗ ಮತ್ತು ಪ್ರತ್ಯೇಕ ಹಿಸ್ಸೆ ಕೋರಿ ದಾವೆ ಸಲ್ಲಿಸಿರುವುದು ಕಂಡುಬಂದಿರುತ್ತದೆ. ತದನಂತರದಲ್ಲಿ ಎರಡು ಪಕ್ಷಕಾರರು ರಾಜೀ ಅರ್ಜಿ ಸಲ್ಲಿಸಿ, ರಾಜಿಯನ್ನು ಸಹ ಮಾಡಿಕೊಂಡಿರುತ್ತಾರೆ. ತದನಂತರದಲ್ಲಿ ಅದಕ್ಕೆ ಸಂಬಂದಪಟ್ಟಂತೆ ಡಿಕ್ರಿಯು ಸಹ ಆಗಿರುತ್ತದೆ ಹಾಗೂ ಸ್ವಾಧೀನತೆಯನ್ನು ಬಿಟ್ಟಿಕೊಟ್ಟಿರುವುದಿಲ್ಲ ಎಂದು ತೀರ್ಪುದಾರ ಋಣಿಯ ವಿರುದ್ದ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತಾರೆ.

11. **ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ರಲ್ಲಿ ಈ ಕೆಳಕಂಡತ ತಿಳಿಸಿರುತ್ತದ. *1. ತಾತ್ಕಾಲೀಕ ನಿರ್ಬಂಧಕಾಜ್ಞೆ ಯನ್ನು ಯಾವ***

***ಸಂದರ್ಭಗಳಲ್ಲಿ ಮಾಡಬಹುದು ಎಂಬುದರ ಬಗ್ಗೆ ತಿಳಿಸಿರುತ್ತದೆ. ಯಾವುದೇ ದಾವೆಯಲ್ಲಿ ಶಪಥ ಪತ್ರದ ಮೂಲಕ ಅಥವಾ ಅನ್ಯಥಾಃ***

***(ಎ) ದಾವೆಯಲ್ಲಿ ವಿವಾದದಲ್ಲಿರುವ ಯಾವುದೇ ಸ್ವತ್ತು ದಾವೆಯ ಯಾವನೇ ಪಕ್ಷಕಾರನಿಂದ ಪೋಲಾಗುವ ಹಾನಿಗೋಳಗಾರಮ ಅಥವಾ ಪರಭಾರೆಯಾಗುಭ ಅಥವಾ ಡಿಕ್ರಿಯ ಅಮಲ್ಜಾರಿಯಲ್ಲಿ ಅಕ್ರಮಾಗಿ ಮರಾಟವಾಗುವ ಅಪಾಯವಿದೇಯೆಂದುಃ ಅಥವಾ***

***(ಬಿ) ಪ್ರತಿವಾದಿಯು ತನ್ನ ಸಾಲಿಗರಿಗೆ ಮೋಸ ಮಾಡುವ ದೃಷ್ಟಿಯಿಂದ ತನ್ನ ಸ್ವತ್ತನ್ನು ಸಾಗಿಸುವನೆಂದು ಅಥವಾ ವಿಲೆ ಮಾಡುವನೆಂದು ಹೆದರರಿಸುತ್ತಾನೆ ಎಂದು ಅಥವಾ ಅಂಥ ಉದ್ದೇಶವನ್ನು ಹೊಂದಿದಾದ್ದನೆ ಎಂದು ಃ***

***(ಸಿ) ದಾವೆಯಲ್ಲಿ ವಿವಾದದಲ್ಲಿರುವ ಯಾವುದೇ ಸ್ವತ್ತಿನ ಸಂಬಂಧದಲ್ಲಿ ಅದನ್ನು ವಾದಿಯ ಸ್ವಾಧೀನದಿಂದ ತಪ್ಪಿಸುವುದಾಗಿ ಅಥವಾ ಅನ್ಯಧಾ ಆ ಬಗ್ಗೆ ವಾದಿಗೆ ಕ್ಷತಿಯುಂಟು ಮಾಡವುದಾಗಿ ಪ್ರತಿವಾದಿಯು ವಾದಿಯನ್ನು ಹೆದರಿಸುತ್ತಾನೆ ಎಂದುಃ ರಜುವಾತಾದರೆ ದಾವೆಯ ವಿಲೆಯಾಗುವವರಗೆ ಅಥವಾ ಮುಂದಿನ ಆದೇಶವರೆಗೆ ಅಂಥ ಕೃತ್ಯವನ್ನು ನಿಗ್ರಹಿಸಲು ನ್ಯಾಯಾಲಯವು ಆದೇಶದ ಮೂಲಕ ತಾತ್ಕಲೀಕ ನಿರ್ಬಂಧಕಾಜ್ಞೆಯನ್ನು ಮಾಡಬಹುದು ಎಂದು ತಿಳಿಸಿರುತ್ತದೆ.***

12. ಅದರಂತೆ ಪ್ರಸ್ತುತ ಡಿಕ್ರಿದಾರರು ಪ್ರಸ್ತುತ ಜಾರಿ ಅರ್ಜಿಯನ್ನು ಸಲ್ಲಿಸಿರುತಾರೆ. ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1ನ್ನು ಗಮನಿಸಿದಾಗ, ಯಾವುದೇ ದಾವೆಯಲ್ಲಿ ಶಪಥ ಪತ್ರದ ಮೂಲಕ ಅಥವಾ ಅನ್ಯಥಾ ಎಂದು ದಾವೆಯಲ್ಲಿ ವಿವಾದದಲ್ಲಿರುವ ಯಾವುದೇ ಸ್ವತ್ತು ದಾವೆಯ ಯಾವನೇ ಪಕ್ಷಕಾರನಿಂದ ಪೋಲಾಗುವ ಹಾನಿಗೋಳಗಾರಮ ಅಥವಾ ಪರಭಾರೆಯಾಗುಭ ಅಥವಾ ಡಿಕ್ರಿಯ ಅಮಲ್ಜಾರಿಯಲ್ಲಿ ಅಕ್ರಮಾಗಿ ಮರಾಟವಾಗುವ ಅಪಾಯವಿದೇಯೆಂದು ಎಂದು

ಕಂಡುಬಂದಾಗ, ಪ್ರತಿವಾದಿಯು ವಾದಿಯನ್ನು ಹೆದರಿಸುತ್ತಾನೆ ಎಂದುಃ ರಜುವಾತಾದರೆ ದಾವೆಯ ವಿಲೆಯಾಗುವವರಗೆ ಅಥವಾ ಮುಂದಿನ ಆದೇಶವರೆಗೆ ಅಂಥ ಕೃತ್ಯವನ್ನು ನಿಗ್ರಹಿಸಲು ನ್ಯಾಯಾಲಯವು ಆದೇಶದ ಮೂಲಕ ತಾತ್ಕಲೀಕ ನಿಧಕಾಜ್ಞೆಯನ್ನು ಮಾಡಬಹುದು ಎಂದು ತಿಳಿಸಿರುತ್ತದೆ.

13. ಆದರೆ ಡಿಕ್ರೀದಾರರು ಅಮಲ್ಜಾರಿಯಲ್ಲಿ ಪ್ರಸ್ತುತ ಅರ್ಜಿ ಸಲ್ಲಿಸಿರುವುದು ಊರ್ಜಿತವಾಗಿರುವುದಿಲ್ಲ. ಅಮಲ್ಜಾರಿ ಅರ್ಜಿ ದಾವೆ ಆಗಿರುವುದಿಲ್ಲ. ಅಮಲ್ಜಾರಿ ಅರ್ಜಿ ತಾತ್ಕಾಲೀಕ ತಡೆಯಾಜ್ಞೆ ಕೋರಿ ಅರ್ಜಿ ಸಲ್ಲಿಸಲು ಬರುವುದಿಲ್ಲ. ತಾತ್ಕಾಲೀಕ ತಡೆಯಾಜ್ಞೆ ಆದೇಶವನ್ನು ಕೇವಲ ದಾವೆಯಲ್ಲಿ ಮಾತ್ರ ಸಲ್ಲಿಸಬಹುದೇ ಹೊರೆತು ಅಮಲ್ಜಾರಿ ಅರ್ಜಿ ಯಲ್ಲಿ ತಾತ್ಕಾಲೀಕ ತಡೆಯಾಜ್ಞೆ ಆದೇಶವನ್ನು ಪಡೆಯಲು ಬರುವುದಿಲ್ಲ. ಸದರಿ ಅಂಶದಿಂದ ತಿಳಿದು ಬರುವುದೆನೆಂದರೆ ದಾವೆಯಲ್ಲಿ ಶಪಥಪತ್ರದ ಮೂಲಕ ಅನ್ಯತ ಎಂದು ತಿಳಿಸಿರುತ್ತದೆ. ಅಮಲ್ಜಾರಿ ಅರ್ಜಿ ಆಗಿರುವುದರಿಂದ ದಾವೆ ಆಗಿರುವುದಿಲ್ಲ. ಜಾರಿ ಅರ್ಜಿಯಲ್ಲಿ ತಾತ್ಕಾಲೀಕ ತಡೆಯಾಜ್ಞೆ ಕೋರಿ ಅರ್ಜಿ ಸಲ್ಲಿಸಿರುವುದು ಊರ್ಜಿತ ವಾಗಿರುವುದಿಲ್ಲ. ಆದ್ದರಿಂದ ಡಿಕ್ರಿದಾರರು ಸಲ್ಲಿಸಿರು ಅರ್ಜಿ ಊರ್ಜಿತವಾಗಿರುವುದಿಲ್ಲ. ಈ ಹಂತದಲ್ಲಿ ವಾದಿಯ ಪರವಾಗಿ ಮೇಲ್ನೋಟದ ನ್ಯಾಯಾಧೀಕರಣ ಇರುವುದಿಲ್ಲ, ಅಲ್ಲದೇ ಅನುಕೂಲದ ತಕ್ಕಡಿ (Balance of connivance) ವಾದಿಯ ಪರವಾಗಿ ಇಲ್ಲದೇ ಇರುವುದು ಕಂಡು ಬಂದಿರುತ್ತದೆ. ಒಂದು ವೇಳೆ ಅರ್ಜಿಯನ್ನು ಪುರಸ್ಕರಿಸುವುದರಿಂದ ಪ್ರತಿವಾದಿಯರಿಗೆ ತುಂಬಲಾರದ ನಷ್ಟ (irreparable loss and injury) ಉಂಟಾಗುತ್ತದೆ ಎಂದು ಮನಗೊಂಡು **ಅಂಶ 1 ರಿಂದ 3 ನ್ನು ನಕರಾತ್ಮಕ ಎಂದು ಉತ್ತರಿಸಲಾಗಿದೆ.**

<u>14. **ಅಂಶ-4**</u> ಈ ಮೇಲೆ ವಿವರಿಸಿರುವ ಕಾರಣಗಳು ಮತ್ತು ನಾನು ಹೊಂದಿದ ಅಭಿಪ್ರಾಯಗಳಿಗಾಗಿ ಈ ಕೆಳಗಿನಂತೆ ಆದೇಶಿಸುತ್ತಿದ್ದೇನೆ.

## **ಆದೇಶ**

ಡಿಕ್ರಿದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿ-1 ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹಕಲಂ 151 ನ್ನು ಖರ್ಚು ಸಹಿತ ತಿರಸ್ಕರಿಸಲಾಗಿದೆ.

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ, ಅವರು ಗಣಕೀಕೃತಗೊಳಿಸಿದ ತರ್ಜುಮೆಯನ್ನು ತಿದ್ದಿ ಸಹಿ ಮಾಡಿ ದಿನಾಂಕ: 24 ನೇ ನವೆಂಬರ್, 2021 ರಂದು ತೆರೆದ ನ್ಯಾಯಾಲಯದಲ್ಲಿ ನಾನು ಉದ್ಘೋಷಿಸಿರುತ್ತೇನೆ).

**(ಸಂದೇಶ.ಕೆ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ,ದೇವನಹಳ್ಳಿ .

**ವಿವರವಾದ ಪ್ರತ್ಯೇಕ ಆದೇಶವನ್ನು ಪ್ರಕಟ ಮಾಡಿದ್ದು, ಅಂತಿಮ ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು**

**ಆದೇಶ**

ಡಿಕ್ರಿದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿ-1 ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹಕಲಂ 151 ನ್ನು ಖರ್ಚು ಸಹಿತ ತಿರಸ್ಕರಿಸಲಾಗಿದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ,ದೇವನಹಳ್ಳಿ